# ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/01/ಇಎಸ್‌ಟಿ(9)/2018/3290

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 15/03/2019.

## ಹಿಂಬರಹ

ಕರ್ನಾಟಕ ಸರ್ಕಾರದ ನಡವಳಿಗಳು: ಸರ್ಕಾರಿ ಆದೇಶದ ಪತ್ರ ಸಂಖ್ಯೆ: ಸಿಆಸುಇ 113 ಸೇವನೆ 2018 ಬೆಂಗಳೂರು ದಿನಾಂಕ:08/03/2019ರ ಪ್ರತಿಯನ್ನು ಮಾಹಿತಿಗಾಗಿ ಈ ಕೆಳಕಂಡವರಿಗೆ ಕಳುಹಿಸಿಕೊಡಲಾಗಿದೆ.

1. ಈ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು, ಸ್ಪೆರಿಕ್‌ಸಂಸ್ಥೆ, ಬೆಂಗಳೂರು, ಸರ್ಕಾರಿ ಗಣಿ ಶಿಕ್ಷಣ ಶಾಲೆ ಕೆ.ಜಿ.ಎಫ್.ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ [ಇಲಾಖಾ ವೆಬ್‌ಸೈಟ್ ಮುಖಾಂತರ]
2. ಈ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ, ಜಂಟಿ ನಿರ್ದೇಶಕರು(ಆಡಳಿತ), ಆಡಳಿತಾಧಿಕಾರಿ, ಸಹಾಯಕ ಆಡಳಿತಾಧಿಕಾರಿ (1), (2) ಹಾಗೂ (3), ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ರಿಜಿಸ್ಟ್ರಾರ್ (ಆಡಳಿತ) ಮಾಹಿತಿಗಾಗಿ
3. ನಿರ್ದೇಶಕರ ಆಪ್ತ ಶಾಖೆಗೆ
4. ಈ ನಿರ್ದೇಶನಾಲಯದ ಇ.ಎಸ್.ಟಿ.(1) ರಿಂದ (10) ವಿಭಾಗಕ್ಕೆ ಮಾಹಿತಿಗಾಗಿ
5. ಈ ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ

ಆಡಳಿತಾಧಿಕಾರಿ

Sh-est(9) Endsmnt

RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**


| ಭಾಗ-IVA | ಬೆಂಗಳೂರು, ಶುಕ್ರವಾರ, ಮಾರ್ಚ್ ೮, ೨೦೧೯ (ಫಾಲ್ಗುಣ ೧೭, ಶಕ ವರ್ಷ ೧೯೪೦) | ನಂ. ೨೩೨ |
|---|---|---|
| Part-IVA | Bengaluru, Friday, March 8, 2019 (Palguna 17, Shaka Varsha 1940) | No. 232 |


ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 113 ಸೇವನೆ 2018, ಬೆಂಗಳೂರು, ದಿನಾಂಕ: 08.03.2019

ಕರ್ನಾಟಕ ನಾಗರಿಕ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು, 2000 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ: 21.01.2019ರ ಅಧಿಸೂಚನೆ ಸಂಖ್ಯೆ: ಸಿಆಸುಇ 113 ಸೇವನೆ 2018ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 21.01.2019ರ ಕರ್ನಾಟಕ ರಾಜ್ಯಪತ್ರದ ಭಾಗ-IVಎ ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ (1990ರ ಕರ್ನಾಟಕ ಅಧಿನಿಯಮ 14) 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ)ಖಂಡವನ್ನು ಪ್ರಕರಣ 8ರೊಂದಿಗೆ ಓದಿಕೊಂಡು ಅದರಲ್ಲಿ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ;

ಸದರಿ ರಾಜ್ಯಪತ್ರವನ್ನು ದಿನಾಂಕ: 21.01.2019ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡಿನ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಯು ಸ್ವೀಕೃತವಾಗದಿರುವುದರಿಂದ;

ಈಗ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ, 14)ರ 3ನೇ ಪ್ರಕರಣದ (1)ನೇ ಉಪ ಪ್ರಕರಣವನ್ನು 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ:- (1) ಈ ನಿಯಮಗಳನ್ನು ಕರ್ನಾಟಕ ನಾಗರಿಕ ಸೇವಾ (ಕಾರ್ಯನಿರ್ವಹಣಾ ವರದಿಗಳು) (ತಿದ್ದುಪಡಿ) ನಿಯಮಗಳು, 2019 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನಿಯಮ 2ರ ತಿದ್ದುಪಡಿ:- ಕರ್ನಾಟಕ ನಾಗರಿಕ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು 2000ರ (ಇನ್ನು ಮುಂದೆ ಸದರಿ ನಿಯಮಗಳು ಎಂದು ಕರೆಯಲ್ಪಡುವ) ನಿಯಮ 2ರ ಉಪ ನಿಯಮ (1)ರಲ್ಲಿ,-

(i) ಎಲ್ಲೆಲ್ಲಿ "ಕಾರ್ಯನಿರ್ವಹಣಾ ವರದಿಯನ್ನು ಬರೆದ" ಎಂದು ಬರುತ್ತದೋ ಅಂತ ಪದಗಳ ಬದಲಾಗಿ "ಕಾರ್ಯನಿರ್ವಹಣಾ ವರದಿಯನ್ನು ದಾಖಲಿಸಿದ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

(ii) "ಖಂಡ (ಇ)ರಲ್ಲಿ "ಬರೆದ ವರದಿ" ಎಂಬ ಪದಗಳ ಬದಲಿಗೆ "ಗ್ರೂಪ್-ಎ ಅಧಿಕಾರಿಗ ಗೆ ಸಂಬಂಧಿಸಿದಂತೆ ವಿದ್ಯುನ್ಮಾನ ರೂಪದಲ್ಲಿ ಮತ್ತು ಗ್ರೂಪ್-ಬಿ ಮತ್ತು ಸಿ ನೌಕರರಿಗೆ ಸಂಬಂಧಿಸಿದಂತೆ ಭೌತಿಕವಾಗಿ ದಾಖಲಿಸಿದ ವರದಿ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

3. **ನಿಯಮ 3ರ ತಿದ್ದುಪಡಿ:-** ಸದರಿ ನಿಯಮಗಳ ನಿಯಮ 3ರ ಉಪ ನಿಯಮ (2)ರ ಖಂಡ (ಎ)ರಲ್ಲಿ, "ಈ ನಿಯಮಗಳಡಿ ಬರೆದ" ಎಂಬ ಪದಗಳ ಬದಲಾಗಿ "ಈ ನಿಯಮಗಳಡಿ ಗ್ರೂಪ್-ಎ ಅಧಿಕಾರಿಗಳಿಗೆ ಸಂಬಂಧಿಸಿದಂತೆ ವಿದ್ಯುನ್ಮಾನ ರೂಪದಲ್ಲಿ ಮತ್ತು ಗ್ರೂಪ್-ಬಿ ಮತ್ತು ಸಿ ನೌಕರರಿಗೆ ಸಂಬಂಧಿಸಿದಂತೆ ಭೌತಿಕವಾಗಿ ದಾಖಲಿಸಿದ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

4. **ನಿಯಮ 4ರ ತಿದ್ದುಪಡಿ:-** ಸದರಿ ನಿಯಮಗಳ ನಿಯಮ 4ರ ಉಪ ನಿಯಮ (1)ರಲ್ಲಿ, "ಬರೆಯತಕ್ಕದ್ದು" ಎಂಬ ಪದಗಳ ಬದಲಾಗಿ "ಗ್ರೂಪ್ ಎ-ಅಧಿಕಾರಿಗಳಿಗೆ ಸಂಬಂಧಿಸಿದಂತೆ ವಿದ್ಯುನ್ಮಾನ ರೂಪದಲ್ಲಿ ಮತ್ತು ಗ್ರೂಪ್-ಬಿ ಮತ್ತು ಸಿ ನೌಕರರಿಗೆ ಸಂಬಂಧಿಸಿದಂತೆ ಭೌತಿಕವಾಗಿ ದಾಖಲಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

5. **ನಿಯಮ 5ರ ತಿದ್ದುಪಡಿ:-** ಸದರಿ ನಿಯಮಗಳ ನಿಯಮ 5 ರಲ್ಲಿ,-

(ಎ) ಉಪ ನಿಯಮ (3)ರ ಖಂಡ (ಎ)ರಲ್ಲಿ, "ಬರೆಯಲು ಸಾಧ್ಯವಾಗದಿದ್ದಲ್ಲಿ" ಎಂಬ ಪದಗಳ ಬದಲಾಗಿ "ದಾಖಲಿಸಲು ಸಾಧ್ಯವಾಗದಿದ್ದಲ್ಲಿ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು;

(ಬಿ) ಉಪ ನಿಯಮ (4)ರಲ್ಲಿ, "ಸಹ ಬರೆಯತಕ್ಕದ್ದು" ಎಂಬ ಪದಗಳ ಬದಲಾಗಿ "ಸಹ ದಾಖಲಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು; ಮತ್ತು

(ಸಿ) ಉಪ ನಿಯಮ (5)ರಲ್ಲಿ, "ಬರೆಯಲಾಗದಿದ್ದಲ್ಲಿ" ಎಂಬ ಪದಗಳ ಬದಲಾಗಿ "ದಾಖಲಿಸಲಾಗದಿದ್ದಲ್ಲಿ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

6. **ನಿಯಮ 7ರ ತಿದ್ದುಪಡಿ:-** ಸದರಿ ನಿಯಮಗಳ ನಿಯಮ 7ರ ವಿವರಣೆ (1) ಮತ್ತು (2)ರಲ್ಲಿ, "ಬರೆಯಬೇಕಾಗಿರುವುದಿಲ್ಲ" ಎಂಬ ಪದಗಳ ಬದಲಾಗಿ "ದಾಖಲಿಸಬೇಕಾಗಿರುವುದಿಲ್ಲ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

7. **ನಿಯಮ 7ಎ ರ ತಿದ್ದುಪಡಿ:-** ಸದರಿ ನಿಯಮಗಳ ನಿಯಮ 7ಎ ರಲ್ಲಿ, "ವರದಿಯನ್ನು ಬರೆಯಲಾಗಿರುವುದಿಲ್ಲ" ಎಂಬ ಪದಗಳ ಬದಲಾಗಿ "ವರದಿಯನ್ನು ದಾಖಲಿಸಲಾಗಿರುವುದಿಲ್ಲ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಗಾಯತ್ರಿ ಎಂ.ಆರ್.**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)

## PERSONNEL AND ADMINISTRATIVE REFORMS SECRETARIAT

## NOTIFICATION

**No. DPAR 113 SCR 2018, Bengaluru, Dated: 08.03.2019.**

Whereas the draft of the Karnataka Civil Services (Performance Reports) Rules, 2000, was published as required by clause (a) of sub-section (2) of Section 3 read with Section 8 of the Karnataka State Civil Services Act, 1978 (Karnataka Act 14 of 1990) in Notification No. DPAR 113 SCR 2018 dated: 21.01.2019 in Part IV-A of the Karnataka Gazette Extraordinary dated: 21.01.2019 inviting objections and suggestions from all persons likely to be affected thereby within fifteen days from the date of publication of the draft in the Official Gazette.

Whereas, the said Gazette was made available to the public on 21.01. 2019.

And whereas, no objections and suggestions have been received in this behalf by the State Government.

Now, therefore, in exercise of the powers conferred by sub-section (1) of Section 3 read with Section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rules, namely;

**RULES**

1. **Title and Commencement.**- (1) These rules may be called the Karnataka Civil Services (Performance Reports) (Amendment) Rules, 2019.

(2) They shall come into force from the date of their final publication in the official Gazette.

2. **Amendment of Rule 2.**- In the Karnataka Civil Services (Performance Reports) Rules, 2000 (hereinafter referred to as the said rules), in rule 2, in sub-rule (1),-

(i) for the words "Performance Report is written", wherever it occurs, the words "Performance Report is recorded" shall be substituted.

(ii) in clause (e), for the words "a report written", the words "a report recorded electronically in respect of Group-A officers and physically in respect of Group-B and C officials" shall be substituted.

3. **Amendment of Rule 3.**- In rule 3 of the said rules, in sub-rule (2), in clause (a), for the words "written under these rules", the words "recorded electronically in respect of Group-A officers and physically in respect of Group-B and C officials under these rules" shall be substituted.

4. **Amendment of Rule 4.**- In rule 4 of the said rules, in sub-rule (1), for the words "shall be written", the words "shall be recorded electronically in respect of Group-A officers and physically in respect of Group-B and C officials" shall be substituted.

5. **Amendment of Rule 5.**- In rule 5 of the said rules,-

(a) in sub-rule (3), in clause (a), for the words "has not been able to write", the words "has not been able to record" shall be substituted;

(b) in sub-rule (4), for the words "shall also be written", the words "shall also be recorded" shall be substituted; and

(c) in sub-rule (5), for the words "could not be written", the words "could not be recorded" shall be substituted.

6. **Amendment of Rule 7.**- In rule 7 of the said rules, in the explanation (1) and (2), for the words "need not be written," the words "need not be recorded" shall be substituted.

7. **Amendment of Rule 7A.**- In rule 7A of the said rules, for the words "report is not written", the words "report is not recorded" shall be substituted.

By Order and in the name of the Governor of Karnataka

**GAYATHRI. M.R.**
Under Secretary to Government
Department of Personnel and Administrative Reforms
(Service Rules-1).